ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ.308/2025

| | | |
|---|---|---|
| ಹೆಸರು | : ಬಿ ಎಸ್ ಬಾಲಕೃಷ್ಣ | ಪಿಡಬ್ಲ್ಯೂ-1 |
| ತಂದೆಯ ಹೆಸರು | : ಲೇಟ್ ಸೋಮಯ್ಯ | ಸಿಡಬ್ಲ್ಯೂ-1 |
| ವಯಸ್ಸು | : 59 ವರ್ಷ | |
| ವೃತ್ತಿ | : ಅಬಕಾರಿ ಉಪನಿರೀಕ್ಷರು | |
| ವಾಸ ಸ್ಥಳ | : ಪಿರಿಯಾಪಟ್ಟಣ | |

ದಿಃ23.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

2022 ರಿಂದ 21.10.2025 ರ ತನಕ ಸೋಮವಾರಪೇಟೆ ವಲಯ ಕಚೇರಿಯಲ್ಲಿ ಅಬಕಾರಿ ಉಪನಿರೀಕ್ಷಕರು ಆಗಿ ಕರ್ತವ್ಯ ನಿವರ್ಹಿಸಿದ್ದೆ.

ಈ ಪ್ರಕರಕ್ಕೆ ಸಂಬಂದಪಟ್ಟಂತೆ ದಿಃ 16.01.2025 ರಂದು ಅವಕಾರಿ ವಲಯ ಕಚೇರಿಯಲ್ಲಿ ರಾತ್ರಿ ಪಾಳಿಯಲ್ಲಿದ್ದಾಗ ನನ್ನ ಜೊತೆ ಚಾಸಾ 2 ರವರು ಇದ್ದಾಗ ಚಾಸಾ 2 ರವರಿಗೆ ದೂರವಾಣಿ ಕರೆ ಮುಖಾಂತರ ದೊಡ್ಡತೊಳೂರು ಗ್ರಾಮದ ನಿವಾಸಿಯಾದ ಆನಂದ ಮಾದಪ್ಪ ಹಾಗೂ ವಿರುಪಾಕ್ಷ ಎಂಬುವವರು ಅಕ್ರಮವಾಗಿ ಕಳ್ಳಬಟ್ಟಿ ತಯಾಿರಿಸಿ ಸಾರ್ವಜನಿಕರಿಗೆ ಮಾರಾಟ ಮಾಡಿ ಗ್ರಾಮದಲ್ಲಿ ಕಲಹ ಉಂಟಾಗುತ್ತದೆ ಎಂದು ದೂರವಾಣಿ ಮುಖಾಂತರ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. ನಂತರ ಅಬಕಾರಿ ನಿರೀಕ್ಷಕರವರಿಗೆ ವಿಷಯವನ್ನು ತಿಳಿಸಿ ನಂತರ ಲಿಖಿತ ದೂರನ್ನು ನನಗೆ ನೀಡಿರುತ್ತಾರೆ. ನಂತರ ನಾನು 3 ತಂಡಗಳನ್ನು ರಚಿಸಿ ಸರ್ಕಾರಿ ವಾಹನದಲ್ಲಿ ಹಾಗೂ ಎರಡು ದ್ವಿಚಕ್ರ ವಾಹನದಲ್ಲಿ ಆ ಗ್ರಾಮಕ್ಕೆ ತೆರಳಿ ಅಲ್ಲಿಯ ಸ್ಥಳೀಯರನ್ನು ಪಂಚರಾಗುವಂತೆ ಕೋರಿಕೊಳ್ಳಲಾಗಿ ನಂತರ ಅದೇ ಗ್ರಾಮದ ಕುಶಾಲಪ್ಪ ಅವರನ್ನು ಪರಿಚಯಿಸಿಕೊಂಡು ನಾವು ಬಂದ ವಿಷಯವನ್ನು ತಿಳಿಸಿ ಪಂಚರಾಗುವಂತೆ ಕೇಳಿಕೊಂಡ ಮೇರೆಗೆ ಹಾಗೂ ಅವರ ಮನೆಯನುನ ತೋರಿಸಲು ಕೇಳಲಾಗಿ ಮನೆಯನ್ನು ತೋರಿಸಿಕೊಟ್ಟಿರುತ್ತಾರೆ. ಪಂಚರಾಗಲು ನಿರಾಕರಿಸಿರುತ್ತಾರೆ. ನಂತರ ಅವರ ಮನೆಗೆ ಹೋಗಿ ಬಾಗಿಲನು ತಟ್ಟಿದಾಗ ಅವರು ಮನೆಯಿಂದ ಆಚೆಗೆ ಬಂದು ಅವರ ಹೆಸರು ಮಾದಪ್ಪ ಎಂದು ತಿಳಿಸಿರುತ್ತಾರೆ. ನಂತರ ಅವರಿಗೆ ನಾವು ಬಂದ ವಿಚಾರವನ್ನು ತಿಳಿಸಿ ಸಾಕ್ಷಿ ಆಧಾರಗಳು ನಾಶವಾಗಿರುವುದರಿಂದ ಸ್ಥಳದಲ್ಲಿ ಶೋಧನಾ ವಾರೆಂಟನ್ನು ತಯಾರಿಸಿಕೊಂಡು ಪರಸ್ಪರ ಅಂಗಶೋಧನೆ ಮಾಡಿಕೊಂಡು ಕೆಂಪು

ಮತ್ತು ಬಿಳಿ ಬಣ್ಣ ಇರುವ ಮನೆಯನ್ನು ಶೋಧನೆ ಮಾಡಲು 6 ಕೋಣೆಗಳನ್ನು ಶೋಧಿಸಿದಾಗ ಯಾವುದೇ ಅಕ್ರಮಗಳು ಕಂಡುಬಂದಿರುವುದಿಲ್ಲ. ನಂತರ ಮನೆಯ ಮುಂಭಾಗದ ಪೂರ್ವ ದಿಕ್ಕಿನಲ್ಲಿರುವ ದನದ ಕೊಟ್ಟಿಗೆಯನ್ನು ಶೋಧನೆ ಮಾಡಲಾಗಿ ಕೊಟ್ಟಿಗೆಯ ಹಿಂಭಾಗದಲ್ಲಿ ಬಟ್ಟೆಗಳಿಂದ ಮುಚ್ಚಿರುವ ಆ ಬಟ್ಟೆಗಳನ್ನು ತೆರೆದು ನೋಡಿದಾಗ 40 ಲೀ ಸಾಮರ್ಥ್ಯದ ನೀಲಿ ಬಣ್ಣದ ಪ್ಲಾಸ್ಟಿಕ್ ಡ್ರಂ ನಲ್ಲಿ ಅಂದಾಜು 30 ಲೀ ಸಾಮರ್ಥ್ಯದ ಬೆಲ್ಲದ ಪುಳಗಂಜಿಯು ದೊರೆತಿರುತ್ತದೆ.  ಪಕ್ಕದಲ್ಲಿಯೇ ಕಳ್ಳಬಟ್ಟಿ ತಯಾ೦ರಿಸುವ ಪರಿಕರಗಳು ದೊರೆತಿರುತ್ತದೆ. 50 ಲೀ ಸಾಮರ್ಥ್ಯದ ಅಲ್ಯುಮಿನಿಯಂ ಅಂಡೆ ದೊರೆತಿರುತ್ತದೆ. 15 ಲೀ ಸಾಮರ್ಥ್ಯದ ಅಲ್ಯುಮಿನಿಯಂ ಪಾತ್ರೆ, 10 ಲೀ ಸಾಮಾರ್ಥದ ತಳಭಾಗದಲ್ಲಿ ರಂಧ್ರವಿರುವ ಅಲ್ಯುಮಿನಿಯಂ ಬಕೆಟ್ ಇವುಗಳು ದೊರೆತಿರುತ್ತದೆ.  30 ಲೀ ಬೆಲ್ಲದ ಪುಳಗಂಜಿಯಲ್ಲಿ ರಾಸಾಯನಿಕ ಪರೀಕ್ಷೆಗೆ 180 ಎಮ್ ಎಲ್ ಗಾಜಿನ ಬಾಟಲಿ ಯಲ್ಲಿ ಪುಳಗಂಜಿಯನ್ನು ತೆಗೆದು ಬಿಳಿ ಬಣ್ಣದ ಬಟ್ಟೆಯನ್ನು ಸುತ್ತಿ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಪರಿಕರಗಳನ್ನು ಮತ್ತು ಡ್ರಂ ಗಳಿಗೆ ಮಾದರಿ ಚೀಟಿಯನ್ನು ಅಂಟಿಸಲಾಗಿರುತ್ತದೆ. ನಂತರ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸಿ ಬೆಲ್ಲದ ಪುಳಗಂಜಿ ಗಾಟು ವಾಸನೆ ಬಂದಿರುವುದರಿಂದ ಮೇಲಾಧಿಕಾರಿಗಳ ಅನುಮತಿ ಪಡೆದು ಸ್ಥಳದಲ್ಲಿ ಉಳಿದ ಪುಳಗಂಜಿಯನ್ನು ನಾಶಪಡಿಸಿರುತ್ತೇವೆ. ನಂತರ ಸ್ಥಳದಲ್ಲಿಯೇ ಮಹಜರನ್ನ  7.30-8.45 ಗಂಟೆಯವರೆಗೆ ಮಾಡಿರುತ್ತೇವೆ. ನಂತರ ಮೊಬೈಲ್ ನಿಂದ ವಿದ್ಯಾಮಾನವನ್ನು ಸೆರೆಹಿಡಿಯಲಾಯಿತು. ನಂತರ ಆರೋಪಿಯನ್ನು ವಶಕ್ಕೆ ಪಡೆದು ಮತ್ತು ಪರಿಕರಗಳನ್ನು ವಶಕ್ಕೆ ಪಡೆದು ಕಚೇರಿಗೆ ಬಂದು ಪ್ರಥಮ ವರ್ತಮಾನವನು ತಯಾರಿಸಿ ಆರೋಪಿಗೆ ನೋಟೀಸ್ಸನ್ನು ನೀಡಿ ಬಿಡಲಾಯಿುತು. ನಂತರ ಮುಂದಿನ ತನಿಖೆಗೆ ಚಾಸಾ 6 ರವರಿಗೆ ಕಡತವನ್ನು ಹಾಗೂ ಮುದ್ದೆ ಮಾಲುಗಳನ್ನು ನೀಡಿರುತ್ತೇವೆ.

. ದೂರನ್ನು ನಿಪಿ 1 ಸಾಕ್ಷಿಯ ಸಹಿಯನ್ನು ನಿಪಿ-1(ಎ), ಪ್ರಥಮ ವರ್ತಮಾನ ವರದಿಯನ್ನು ನಿಪಿ 2 ಸಾಕ್ಷಿಯ ಸಹಿಯನ್ನು ನಿಪಿ-2(ಎ),ಶೋಧನಾ ಸಮಚ್ಚಿತ ವರದಿ ನಿಪಿ 3 ಸಾಕ್ಷಿಯ ಸಹಿಯನ್ನು ನಿಪಿ-3(ಎ), ಮಹಜರ್ ನಿಪಿ 4 ಸಾಕ್ಷಿಯ ಸಹಿಯನ್ನು ನಿಪಿ-4(ಎ), ಜಪ್ತಿ ಮಾಡಲಾದಂತಹ  ಸ್ವತ್ತು ನಿಪಿ 5 ಸಾಕ್ಷಿಯ ಸಹಿಯನ್ನು ನಿಪಿ-5(ಎ),ಮಾದರಿ ಮೊಹರು ನಿಪಿ 6 ಸಾಕ್ಷಿಯ ಸಹಿಯನ್ನು ನಿಪಿ-6(ಎ), ಫೋಟೋ ನಿಪಿ 7 ಮತ್ತು 8,  ಸಿಡಿ ನಿಪಿ 9,  ದೃಢೀಕರಣ ಪತ್ರ ನಿಪಿ 10 ಎಂದು ಗುರುತಿಸಲಾಯಿುತು. ಮಾದರಿಗಾಗಿ ತೆಗೆದ ಪುಳಗಂಜಿ ಗಾಜಿನ ಬಾಟಲಿಯಲ್ಲಿ ಇದ್ದು ಸಾಕ್ಷಿ  ನೋಡಿ ಗುರುತಿಸಿದ್ದು ಎಂ ಒ 1 ಎಂದು ಗುರುತಿಸಲಾಯಿುತು. ಆರೋಪಿಯನ್ನು ನೋಡಿ

ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ.ಕೆ.ಎಸ್. ಪಿ  ವಕೀಲರಿಂದ:</u>

ಎರಡು ಸರ್ಕಾರಿ ವಾಹನ ಹಾಗು ಒಂದು ಖಾಸಗಿ ವಾಹನದಲ್ಲಿ ಘಟನಾ ಸ್ಥಳಕ್ಕ ಹೋಗಿರುತ್ತೇವೆ.  ನಮ್ಮ ಕಚೇರಿಯಲ್ಲಿ ಲಾಗ್ ಪುಸ್ತಕ ಇರುತತದೆ. ಸದರಿ ಪುಸ್ತಕದಲ್ಲಿ ಸರ್ಕಾರಿ ವಾಹನದ ಬಗ್ಗೆ ನಮೂದು ಮಾಡಿರುತ್ತೇವೆ. ಖಾಸಗಿ ವಾಹನವು ಇಲಾಖೆಯ ಸಿಬ್ಬಂದಿಗೆ ಸೇರಿರುತ್ತದೆ ಅದನ್ನು ಮಹಜರಿನಲ್ಲಿ ಹೇಳಿರುವುದಿಲ್ಲ. ನಾವು  ಎಲ್ಲಿ ದಾಳಿ ಮಾಡಿರುತ್ತೇವೆ ಎಂಬುದರ ಬಗ್ಗೆ ನಮ್ಮ ಚಲನಾ ವಲನ ಪುಸ್ತಕದಲ್ಲಿ ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮಾದರಿ ಮೊಹರನ್ನು ಸ್ಥಳದಲ್ಲೇ ಮಾಡುತ್ತೇವೆ ಸದರಿ ಮಾದರಿ ಮೊಹರಲ್ಲಿ ಕ್ರೈಂ ನಂಬರ್ ನಮೂದು ಮಾಡುತ್ತೇವೆ ಎಂದರೆ ಸರಿ. ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ. ಆರೋಪಿಯ ಮನೆಯ ಪಕ್ಕದಲ್ಲಿ ಸಾಕಷು ಮನೆಗಳು ಇರುತ್ತವೆ ಎಂದರೆ ಸರಿ.  ಸ್ಥಳೀಯರನ್ನು ಮಹಜರ ಸಾಕ್ಷಿದಾರರಾಗಿ ಕರೆದಿರುತ್ತೇವೆ ಆದರೆ ಯಾರೂ ಬಂದಿರುವುದಿಲ್ಲ. ಸದರಿ ವಿಷಯವನ್ನು ಮಹಜರಿನಲ್ಲಿ ಹೇಳಿರುತ್ತೇವೆ. ನಾನು ದಾಳಿಗೆ ಹೋದಂತಹ ಊರು ದೊಡ್ಡ ತೋಳೂರು. ನಾನು ಹಾಜರುಪಡಿಸಿರುವಂತಹ ಫೋಟೋದಲ್ಲಿ ಚಿಕ್ಕತೋಳೂರು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಾವು ಅಮಾನತು ಪಡಿಸಿಕೊಂಡಂತಹ ಪರಿಕರಗಳ ಮೇಲೆ ಮಾದರಿ ಚೀಟಿಯನ್ನು ಅಂಟಿಸಿರುತ್ತೇವೆ. ಫೋಟೋದಲ್ಲಿ ಯಾವುದೇ ಮಾದರಿಯ ಚೀಟಿ ಇರುವುದಿಲ್ಲ ಎಂದರೆ ಸರಿ. ಆರೋಪಿಯು ಮಾರಾಟ ಮಾಡಿರುವ ಬಗ್ಗೆ ಯಾವುದೇ ರೀತಿ ನಾವು ವಿಚಾರಣೆ ಮಾಡಿರುವುದಿಲ್ಲ. ಬಟ್ಟೆ ಮುಚ್ಚಿರುವ ಬಗ್ಗೆ ಮಹಜರಲ್ಲಿ ನಮೂದು ಮಾಡಿರುವುದಿಲ್ಲ. ಆ ಬಟ್ಟೆಗಳನ್ನು ಸಹ ನಾವು ಅಮಾನತು ಪಡಿಸಿಕೊಂಡಿರುವುದಿಲ್ಲ. ನಾನು ಸ್ಥಳಕ್ಕ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿ ಮಾಡಿರುತ್ತೇವೆ ಎಂದರೆ ಸರಿಯಲ್ಲ ಹಾಗೂ ಆರೋಪಿಯಿಂದ ಪರಿಕರಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಗಳಿಗೋಸ್ಕರ ಪ್ರಕರಣವನುನ ಆರೋಪಿಯ ವಿರುದ್ದ ದಾಖಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ